# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 18/12/2021 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು. ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

1) ಹಿಂದಿನ ಸಭೆಯ ನಡುವಳಿಯನ್ನು ಸಭೆಯಲ್ಲಿ ಚರ್ಚಿಸಿದಂತೆ ಸೂಕ್ತ ಕ್ರಮವಹಿಸಲು ಸಭೆಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರಿಗೆ ತಿಳಿಸಿದರು.

2) ವಿದ್ಯುತ್ ದೀಪ ಮತ್ತು ಬೆಸ್ಕಾಂ:

- ವಿದ್ಯುತ್ ಇಲಾಖೆಗೆ ಸಂಬಂಧಿಸಿದಂತೆ ಶೇಷಾದ್ರಿಪುರಂ 2ನೇ ಮುಖ್ಯರಸ್ತೆಯ, ಲಕ್ಷ್ಮೀ ನರ್ಸಿಂಗ್ ಹೋಮ್, ಚರ್ಚ್ ಎದುರು ಆಂಜನೇಯ ಬ್ಲಾಕ್ ಹತ್ತಿರ ಶ್ರೀಮತಿ.ವೆನಿಲ್ಲಾ (9108129362) ರವರು ಮಾತಾನಾಡುತ್ತ ಸಂಬಂಧಪಟ್ಟವರು ಪದೇ ಪದೇ ವಿದ್ಯುತ್ ದೀಪ ಅಳವಡಿಸುವಂತೆ ದೂರು ನೀಡಿದರು ಸಹ ಯಾವುದೇ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿಲ್ಲ ಎಂದು ಸಭೆಗೆ ತಿಳಿಸಿದರು.

- ಅಂಗನವಾಡಿ 4ನೇ ಕ್ರಾಸ್, ವಿವೇಕನಂದ ನಗರ ಹತ್ತಿರ, ಆರು ವಿದ್ಯುತ್ ದೀಪಗಳು ಅಳವಡಿಸುವಂತೆ ಸೂಕ್ತ ಸಂಬಂಧಪಟ್ಟವರಿಗೆ ಬಹಳಷ್ಟು ಸಲ ಕೋರಿದರು ಸಹ ಕೆಲಸನಿರ್ವಹಿಸದೇ ಇರುವ ಬಗ್ಗೆ ಪುಷ್ಪ (6361180600) ರವರು ಸಭೆಗೆ ತಿಳಿಸಿದರು.

- ಮುನೇಶ್ವರ ಬ್ಲಾಕ್, ಜಿ ಮ್ಯೆನ್, 4ನೇ ಕ್ರಾಸ್ ರಸ್ತೆಯಲ್ಲಿ ಎರಡು ವಿದ್ಯುತ್ ದೀಪ ಅಳವಡಿಸುವಂತೆ ಸಭೆಗೆ ಸದಸ್ಯರು ಕೋರಿರುದರು.

- ಬಸಪ್ಪ ಗಾರ್ಡನ್ ಎ ಕ್ರಾಸ್, ಆಶ್ರಮ ಕಾರ್ನರ್ ಹತ್ತಿರ ವಿದ್ಯುತ್ ದೀಪ ಅಳವಡಿಸಲು ಪಾಂಡುರಂಗ (9036280840) ರವರು ಸಭೆಗೆ ತಿಳಿಸಿದರು.

- ಗಂಗಾಧರ್ (9686271531) ರವರು ಮಾತಾನಾಡುತ್ತ, ಮಲ್ಲೇಶ್ವರಂ, 4ನೇ ಕ್ರಾಸ್, ಸಂಪಿಗೆ ರೋಡ್ ವಿದ್ಯುತ್ ದೀಪ ಅಳವಡಿಸುವಂತೆ 3 ತಿಂಗಳಿಂದ ಕೋರಿಕೋಳ್ಳತ್ತಿದೇವೆ. ಆದರೆ ಯಾವುದೇ ರೀತಿಯ ಪ್ರಯೋಜನವಾಗಿಲ್ಲವೆಂದು ಸಭೆಗೆ ತಿಳಿಸಿದರು.

- 1ನೇ ಕ್ರಾಸ್, ಸ್ವಿಮಿಂಗ್ ಫೂಲ್ ಎಕ್ಸಟೇನ್‌ಶನ್ ಬೀದಿ ದೀಪದ ಕಂಬದಲ್ಲಿ ಬಾಕ್ಸ್ ತೆರೆದಿದ್ದು, ಹೊಸ ಬಾಕ್ಸ್ ಅಳವಡಿಸುವಂತೆ ಸಭೆಗೆ ಜಯಚಂದ್ರ (9900106978) ರವರು ಸಭೆಗೆ ಕೋರಿದರು.

ವಿದ್ಯುತ್ ದಾರಿ ದೀಪಗಳಿಗೆ ಸಂಬಂಧಿಸಿದಂತೆ ಅಲವು ಸಮಸ್ಯೆಗಳು ಸಭೆಯಲ್ಲಿ ದೂರಿರುವ ಹಿನ್ನಲೆಯಲ್ಲಿ AE ಪಾಷ ರವರು ಸಭೆಗೆ ಹಾಜರಾಗದೇ ಇರುವುದರಿಂದ ನೋಡಲ್ ಅಧಿಕಾರಿಗಳು ಸದರಿ ರವರಿಗೆ ಕರೆಯನ್ನು ಮಾಡಿದ್ದು, ಕೂಡಲೇ ಸರಿಪಡಿಸಬೇಕೆಂದು ಹಾಗೇಯೇ ಇನ್ನೂ ಮುಂದೆ ಸಭೆಗೆ ಹಾಜರಾಗಬೇಕೆಂದು ಸೂಚಿಸಿದರು.

3) ಕೆ.ಸಿ ಜನರಲ್ ಆಸ್ಪತ್ರೆ ಬಳಿ ಇರುವ ಉದ್ಯಾನವನ, ಲಿಂಕ್ ರೋಡ್ ಟ್ರಾಯಂಗುಲ್ಯರ್ ಪಾರ್ಕ್ ಮತ್ತು ಬಿಜೆಪಿ ಆಫೀಸ್ ಪಕ್ಕದಲ್ಲಿರುವ ಉದ್ಯಾನವನಗಳನ್ನು ಸರಿಯಾಗಿ ನಿರ್ವಹಣೆ ಮಾಡುವಂತೆ ಸಂಬಂಧಪಟ್ಟವರಿಗೆ ಸಭೆಯಲ್ಲಿ ಸೂಚಿಸಲಾಯಿತು.

4) 8ನೇ ಕ್ರಾಸ್, ಮಲ್ಲೇಶ್ವರಂನಲ್ಲಿ ಅನಧಿಕೃತವಾಗಿ ಫುಟ್‌ಬಾತ್ ಓಡಾಡುವ ಜಾಗದಲ್ಲಿ ಅಂಗಡಿಗಳನ್ನು ಹಾಕಿಕೊಂಡಿರುತ್ತಾರೆ ಎಂದು ಸಭೆಗೆ ಸದಸ್ಯರು ತಿಳಿಸಿದರು. ಪೋಲಿಸರೊಂದಿಗೆ ಚರ್ಚಿಸಿ ದಿನಾಂಕವನ್ನು ನಿಗದಿಪಡಿಸಿ ಸ್ಥಳಪರಿಶೀಲನೆಗೆ ಹೋಗಣವೆಂದು ಸಭೆಗೆ ತಿಳಿಸಿದರು.

ಅಧ್ಯಕ್ಷರ/ನೋಡಲ್ ಅಧಿಕಾರಿಯ ಅನುಮತಿಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ಸಂ.77,
ದತ್ತಾತ್ರೇಯ ದೇವಸ್ಥಾನ ವಾರ್ಡ್

ಪ್ರತಿಯನ್ನು:-

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.